## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆ: 308/2023**

**ಪಿರ್ಯಾದಿ** : ಮೂಡಿಗೆರೆ ಕಾಫೀ ಟ್ರೇಡಿಂಗ್ ಕಂಪನಿ,
ಇದರ ಪರವಾಗಿ ಇದರ ಪ್ರೊಪ್ರೈಟರ್
ಶ್ರೀ ಅರವಿಂದ್ ಪ್ರಸಾದ್ ಗೌಡ,
ಬಿನ್ ದಿಃ ಎಂ.ಎನ್ ಮೆಣಸೇಗೌಡ,
ವಯಸ್ಸು ಸುಮಾರು 52 ವರ್ಷ,
ವಾಸಃ ಕೆ.ಎಂ ರಸ್ತೆ, ಗಂಗನಮಕ್ಕಿ,
ಮೂಡಿಗೆರೆ ಪಟ್ಟಣ, ಅಂಚೆ ಮತ್ತು ತಾಲ್ಲೂಕು.
ಚಿಕ್ಕಮಗಳೂರು ಜಿಲ್ಲೆ.

**ವಿರುದ್ಧ**

**ಆರೋಪಿ** : ಶ್ರೀ ಸತೀಶ್ ಕುಮಾರ್ ಸುಬ್ರಮಣಿ,
ಬಿನ್ ಸುಬ್ರಮಣಿ, ಪ್ರೊಪ್ರೈಟರ್,
ರಾಘವಿ ಟ್ರೇಡರ್ಸ್, # 2/108,
ಮಾಡಲೈಪಟ್ಟಿ ಪಡೂರ್,
ಓವರ್ ಬ್ರಿಡ್ಜ್ ಹತ್ತಿರ,
ನಾಮಕ್ಕಲ್ ನಿಂದ ಸೇಲಂ ಬೈಪಾಸ್ ರಸ್ತೆ,
ನಾಮಕ್ಕಲ್-637 003,
ತಮಿಳುನಾಡು.

### ಆಪಾದನೆಯ ಸಾರಾಂಶ

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಪಿರ್ಯಾದುದಾರರು ಮುಾಡಿಗೆರೆಯಲ್ಲಿ ಮೂಡಿಗೆರೆ ಕಾಫೀ ಟ್ರೇಡಿಂಗ್ ಕಂಪನಿ ಎಂಬ ಹೆಸರಿನಲ್ಲಿ ವ್ಯಾಪರವನ್ನು ನಡೆಸುತ್ತಿದ್ದು, ಆರೋಪಿಯಾದ ನೀವು ರಾಘವಿ ಟ್ರೇಡರ್ಸ್ ಎಂಬ ಹೆಸರಿನಲ್ಲಿ ಹೋಲ್ ಸೇಲ್ ದರದಲ್ಲಿ ಮಸಾಲೆ ಪದಾರ್ಥಗಳ ವ್ಯಾಪಾರವನ್ನು ನಡೆಸುತ್ತಿದ್ದು, ಆರೋಪಿಯಾದ ನೀವು ಕಾಫೀ ಬೀಜವನ್ನು ಪಿರ್ಯಾದುದಾರರಿಗೆ ಮಾರಾಟ ಮಾಡುವುದಾಗಿ ಒಪ್ಪಿ, ಮುಂಗಡವಾಗಿ ಅವರಿಂದ 13,66,200/- ರೂಪಾಯಿಗಳನ್ನು ಪಡೆದಿದ್ದು, ನಂತರ ಆರೋಪಿಯಾದ ನೀವು ಕಾಫೀ ಬೀಜವನ್ನು ಪಿರ್ಯಾದುದಾರರಿಗೆ ಸರಬರಾಜು ಮಾಡಲು ವಿಫಲರಾಗಿದ್ದು, ತದನಂತರ ಮುಂಗಡವಾಗಿ ಪಡೆದ ಹಣದಲ್ಲಿ 7,66,200/- ರೂಪಾಯಿಗಳನ್ನು ಮರು ಪಾವತಿ ಮಾಡಿ, ಇನ್ನುಳಿದ 6,00,000/- ರೂಪಾಯಿಗಳನ್ನು ಮರು ಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಐಸಿಐಸಿಐ ಬ್ಯಾಂಕ್, ನಾಮಕ್ಕಲ್ ಶಾಖೆ, ತಮಿಳುನಾಡು ರಾಜ್ಯದ ಚೆಕ್ ಸಂಖ್ಯೆ 000780, ದಿನಾಂಕ.10.09.2022, ರೂ.6,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಬ್ಯಾಂಕ್ ಆಫ್ ಬರೋಡಾ, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, Account Blocked Situation Covered in 2125 ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 09.11.2022 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

*(ದಿನಾಂಕ 05.04.2024 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

**Sd**/-

ಮೂಡಿಗೆರೆ
ದಿನಾಂಕಃ 05.04.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.